# ಜನಪದ ಆರಾಧನಾ ರಂಗಭೂಮಿ ಮತ್ತು ಅದರ ಸಾಮಾಜಿಕ ಪ್ರಭಾವ

ಜಯಲಕ್ಷ್ಮಿ ಆರ್. ಶೆಟ್ಟಿ*

DOI: https://doi.org/10.5281/zenodo.22108152

**ABSTRACT**

ಜನಪದ ಆರಾಧನಾ ರಂಗಭೂಮಿಯು ಕೇವಲ ಧಾರ್ಮಿಕ ಆಚರಣೆಯಾಗಿರದೆ, ಸಮುದಾಯದ ಸಂಸ್ಕೃತಿ, ನಂಬಿಕೆ ಮತ್ತು ಸಾಮಾಜಿಕ ಸೌಹಾರ್ದತೆಯನ್ನು ಕಾಯ್ದುಕೊಳ್ಳುವ ಪ್ರಭಾವಶಾಲಿ ದೇಶಿ ಮಾಧ್ಯಮವಾಗಿದೆ. ದೈವಾರಾಧನೆ, ನಾಗಾರಾಧನೆ, ಬಯಲಾಟ ಹಾಗೂ ಯಕ್ಷಗಾನದಂತಹ ಕಲಾಪ್ರಕಾರಗಳು ಪೂಜಾಸಂಕಲ್ಪ, ಕಥಾನಕ ಮತ್ತು ಅಭಿನಯಗಳ ಸಮ್ಮಿಲನದಿಂದ ಜನಪದರ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಅಗತ್ಯಗಳನ್ನು ಪೂರೈಸುತ್ತಾ ಬಂದಿದೆ. ಈ ಸಂಶೋಧನಾ ಪ್ರಬಂಧವು ಆರಾಧನಾ ರಂಗಕಲೆಯ ಸಾಂಸ್ಕೃತಿಕ ಸ್ವರೂಪ ಮತ್ತು ಅದು ಸಮಾಜದ ಮೇಲೆ ಬೀರುವ ವೈವಿಧ್ಯಮಯ ಪ್ರಭಾವಗಳನ್ನು ವಿಶ್ಲೇಷಿಸುತ್ತದೆ.

ಈ ರಂಗಭೂಮಿಯು ಸಮಾಜದಲ್ಲಿ ಧರ್ಮ, ನ್ಯಾಯ ಮತ್ತು ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಜೊತೆಗೆ ಸಮುದಾಯಗಳಲ್ಲಿ ಸಾಮರಸ್ಯ ಮತ್ತು ಐಕ್ಯತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆರಾಧನಾ ವೇದಿಕೆಗಳಲ್ಲಿ ನಡೆಯುವ ನ್ಯಾಯತೀರ್ಮಾನಗಳು ಮತ್ತು ವಿಭಿನ್ನ ಸಮುದಾಯಗಳ ಸಕ್ರಿಯ ಭಾಗಿತ್ವವು ಸಾಮಾಜಿಕ ಸಮಾನತೆ ಹಾಗೂ ಸಹಬಾಳ್ವೆಗೆ ದಾರಿಯಾಗಿದೆ. ಅಲ್ಲದೆ ಮೌಖಿಕ ಪರಂಪರೆ, ಜನಪದ ಕಾವ್ಯ, ನೃತ್ಯ ಮತ್ತು ಸಂಗೀತವನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸುವ ಜೀವಂತ ಸೇತುವೆಯಾಗಿ ಇದು ಕಾರ್ಯನಿರ್ವಹಿಸುತ್ತದೆ.

**KEYWORDS:** ಆರಾಧನಾ ರಂಗಭೂಮಿ, ಜನಪದ ಕಲೆಗಳು, ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ದೈವಾರಾಧನೆ, ನಾಗಾರಾಧನೆ.

* **ಜಯಲಕ್ಷ್ಮಿ ಆರ್. ಶೆಟ್ಟಿ,** ಉಪನ್ಯಾಸಕಿ, ತುಳು ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು (ಸಂಧ್ಯಾ ಕಾರ್ಯಕ್ರಮ), ಮಂಗಳೂರು.

ಆಧುನೀಕರಣ ಮತ್ತು ಜಾಗತೀಕರಣದ ಸವಾಲುಗಳ ನಡುವೆಯೂ ಗ್ರಾಮೀಣ ಸಮಾಜದ ಜಾಗೃತಿ ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಆರಾಧನಾ ರಂಗಭೂಮಿ ವಹಿಸುವ ವಿಶಿಷ್ಟ ಪಾತ್ರವನ್ನು ಈ ಅಧ್ಯಯನವು ಎತ್ತಿಹಿಡಿಯುತ್ತದೆ.

ತುಳುನಾಡಿನ ಜನಪದ ರಂಗಭೂಮಿ ಪ್ರಾಚೀನ ಇತಿಹಾಸದೊಂದಿಗೆ ವೈವಿಧ್ಯ ಮತ್ತು ವೈಶಿಷ್ಟ್ಯಗಳಿಗೆ ಹೆಸರುವಾಸಿಯಾಗಿದ್ದು, ನಮ್ಮ ಪ್ರಾಚೀನ ಸಂಸ್ಕೃತಿಯ ಹಲವಾರು ಅಂಶಗಳನ್ನು ಮೈಗೂಡಿಸಿಕೊಂಡಿದೆ. ಪ್ರಸ್ತುತ ಪ್ರಚಲಿತದಲ್ಲಿರುವ ಹಲವಾರು ಶಿಷ್ಟಕಲೆಗಳಿಗೆ ಪೂರಕವಾಗಿ ಪ್ರೇರಣೆಯನ್ನು ನೀಡುತ್ತಾ ಇಂದಿಗೂ ಬೆಳೆಯುತ್ತ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಜನಪದ ರಂಗಭೂಮಿ ಎಂದರೆ ಗ್ರಾಮೀಣ ಜನಸಮುದಾಯದ ಧಾರ್ಮಿಕ ನಂಬಿಕೆ, ಆಚರಣೆ, ಆರಾಧನೆ ಹಾಗೂ ಸಾಮಾಜಿಕ ಬದುಕಿನೊಂದಿಗೆ ಬೆಸೆದುಕೊಂಡಿರುವ ಪ್ರದರ್ಶನ ಕಲೆ. ಇದು ಕೇವಲ ಮನರಂಜನೆಯ ಮಾಧ್ಯಮವಾಗದೆ ಜನರ ಧಾರ್ಮಿಕ ನಂಬಿಕೆ, ಸಾಮಾಜಿಕ ಸಂಬಂಧ, ಸಂಸ್ಕೃತಿ ಮತ್ತು ಸಮುದಾಯದ ಒಗ್ಗಟ್ಟನ್ನು ಪ್ರತಿಬಿಂಬಿಸುವ ಜೀವಂತ ಪರಂಪರೆಯಾಗಿದೆ.

ಜನಪದರು ಹಲವು ದೃಷ್ಟಿಕೋನಗಳಿಂದ ಜನಪದರಲ್ಲಿದ್ದಂತಹ ಪರಿಸರ ಪ್ರಜ್ಞೆ, ಪ್ರಕೃತಿಯನ್ನು ಜತನದಿಂದ ಕಾಪಾಡುವಲ್ಲಿ ಜನಪದರು ತೋರಿದ ಕಾಳಜಿ, ಅಳವಡಿಸಿಕೊಂಡ ಮಾರ್ಗಗಳು ಇಂದಿನ ಆಧುನಿಕ ಯುಗದಲ್ಲೂ ಸೋಜಿಗದ ವಿಷಯವಾಗಿ ಕಂಡುಬರುವುದಂತೂ ಅಕ್ಷರಶಃ ಸತ್ಯ. ಜನಪದ ಆರಾಧನಾ ರಂಗಭೂಮಿಯಲ್ಲಿ ನೃತ್ಯ, ಸಂಗೀತ, ವೇಷಭೂಷಣ, ಸಂಭಾಷಣೆ, ಕಥನ, ವಿಧಿ–ವಿಧಾನ ಮತ್ತು ಪ್ರದರ್ಶನಗಳು ಪರಸ್ಪರ ಬೆಸೆದುಕೊಂಡಿರುತ್ತವೆ. ಇಲ್ಲಿ ಪ್ರಮುಖವಾಗಿ ಕಂಡುಬರುವ ದೈವಾರಾಧನೆ ಮತ್ತು ನಾಗಾರಾಧನೆಗಳ ಆರಾಧನಾ ಪ್ರಕ್ರಿಯೆಗಳನ್ನು ಗಮನಿಸಿದರೆ ಅದರಲ್ಲಿರುವ ಹತ್ತು ಹಲವು ಕಟ್ಟುಕಟ್ಟಳೆಗಳ ಒಳಗಿರುವ ಪರಿಸರ ಪ್ರಜ್ಞೆ ಎದ್ದು ಕಾಣುತ್ತದೆ. ಜನಪದರು ಅದನ್ನು ಆರಾಧನೆಯೊಳಗೆ ಹೆಣೆದ ನೈಪುಣ್ಯವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ತಿಳಿಯಬಹುದು. ಇದು ಕೇವಲ ಧಾರ್ಮಿಕ ನಂಬಿಕೆಯಲ್ಲ; ಪ್ರಕೃತಿ ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧವನ್ನು ಸಂಕೇತಿಸುತ್ತದೆ.

ಆರಾಧನಾ ರಂಗಭೂಮಿಯು ಸ್ಥಳೀಯ ದೈವದೇವರು, ಪುರಾಣದ ಕಥೆಗಳು, ಜನರ ನಂಬಿಕೆಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಮಾರ್ಗವಾಗಿದೆ. ದೈವದೇವರು ಮತ್ತು ಮನುಷ್ಯನ ಸಂಬಂಧ, ಪಾಪ–ಪುಣ್ಯ, ನ್ಯಾಯ–ಅನ್ಯಾಯ ಮುಂತಾದ ಪರಿಕಲ್ಪನೆಗಳನ್ನು ಒಂದು ಚೌಕಟ್ಟಿನೊಳಗೆ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಅಭಿವ್ಯಕ್ತಪಡಿಸುತ್ತದೆ.

ತುಳುನಾಡಿನ ಭೂತಾರಾಧನೆ ಮತ್ತು ನಾಗಾರಾಧನೆಗಳಿಗೆ ಬಹಳ ಪ್ರಾಚೀನ ಇತಿಹಾಸವಿದೆ. ಪ್ರಕೃತಿ ಆರಾಧಕರಾದ ತುಳುವರ ಪ್ರಕೃತಿಯೊಂದಿಗಿನ ಸಂಬಂಧ ಅನಾದಿಕಾಲದ್ದು. ಮರದ ಬುಡದ ಬಳಿ ಒಂದು ಸಾಮಾನ್ಯ ಕಲ್ಲನ್ನು ದೈವವೆಂದು ಕಲ್ಪಿಸಿ ಅದನ್ನು ಆರಾಧಿಸಿಕೊಂಡು ಬರುವುದರೊಂದಿಗೆ ಅದರ ಸುತ್ತಮುತ್ತಲಿನ ಕಾಡನ್ನು ದೈವದ ಕಾಡು–ದೈವದನೆಲೆ ಎಂದು ಕರೆಯುವುದು ಕೆಲವು ನಿರ್ದಿಷ್ಟ ಮರಗಳಲ್ಲಿ ಅದೃಶ್ಯ ಶಕ್ತಿಗಳ ಸಾನಿಧ್ಯ ಇದೆ ಎನ್ನುವ ನಂಬಿಕೆಗಳನ್ನು ಆರಾಧಿಸುವುದರೊಂದಿಗೆ ದೈವದ ನೆಲೆ ಇರುವ ಕಾಡಿನಿಂದ ಒಂದು ಕಡ್ಡಿಯನ್ನೂ ಮುರಿಯಬಾರದು ಎಂಬ ವಿಧಿನಿಷೇಧಗಳಿಂದ ಪ್ರಕೃತಿ ಸ್ವಚ್ಛಂದವಾಗಿ ಬೆಳೆಯುತ್ತದೆ. ಇದು ಜೀವವೈವಿಧ್ಯತೆ ಮತ್ತು ಕಾಡುಗಳನ್ನು ನೈಸರ್ಗಿಕವಾಗಿ

ಉಳಿಸಲು ಕೈಗೊಂಡ ಕ್ರಮವಾಗಿದೆ. ಹಾಗೆಯೇ ಇಲ್ಲಿ ನೂರಾರು ವರ್ಷ ಹಳೆಯ ಮರಗಳು, ಅಪರೂಪದ ಗಿಡಮೂಲಿಕೆಗಳ ರಕ್ಷಣೆ ಮತ್ತು ಪಕ್ಷಿಗಳಿಗೆ ಆಶ್ರಯ ಸಿಗುವುದು. ಈ ದೃಷ್ಟಿಯಲ್ಲೇ ಸೃಷ್ಟಿಯಾಗಿ ತುಳುವರಿಂದ ಆರಾಧಿಸಲ್ಪಡುವ ಮಲೆಜುಮಾದಿ, ಮಲೆಚಾಮುಂಡಿ, ಮಲೆಭೂತ, ಮಲೆಕೊರತಿ, ಕಾಡ್ತಲೆ, ಕಾನದ ಗುಳಿಗ, ಕಾನದ ಪಂಜುರ್ಲಿ, ಕಾನದ ಜುಮಾದಿ ಇವೆಲ್ಲವೂ ಕಾಡಿನೊಂದಿಗೆ ಸಂಬಂಧವಿರುವ ದೈವಗಳಾಗಿವೆ.

ತುಳುವರ ಆದಿಮೂಲ ದೈವ ಬೆರ್ಮೆರ್ ವನ ಅಧಿಪತ್ಯವುಳ್ಳವನಾಗಿದ್ದು, ಲೆಕ್ಕೆಸಿರಿ ದೈವವು ವನದೇವತೆಯೆಂದು ಆರಾಧಿಸಲ್ಪಡುತ್ತದೆ. ಕೆಲವೊಂದು ದೈವದ ಕಟ್ಟುಕಟ್ಟಳೆಗಳ 'ಇಂಡಿ ತರ್ಪಣ' ಎಂಬ ಪ್ರಕ್ರಿಯೆಯಲ್ಲಿ ಹಲವಾರು ಬಗೆಯ ಸೊಪ್ಪು, ಕೆತ್ತೆ, ಹೂವು, ಬಾಳೆಯ ದಿಂಡಿನ ತುಂಡು ಇತ್ಯಾದಿಗಳ ಮಿಶ್ರಣ ಬಳಕೆಯಾಗುತ್ತದೆ. ಇಂತಹದೇ ಸಸ್ಯಗಳು ಈ ಇಂಡಿಯಲ್ಲಿ ಸೇರಲೇಬೇಕೆಂದಿದೆ. 16 ಇಂಡಿಯ ಕಟ್ಟಯಲ್ಲಿ 16 ಜಾತಿಯ ಮರಗಳ ಎಲೆಗಳನ್ನು ದೈವದ ನೇಮದ ಕೊನೆಯಲ್ಲಿ ಹಾರಿಸುವ ಕ್ರಮ ಇದೆ ಈ ಎಲ್ಲಾ ಜಾತಿಯ ಮರಗಳು ದೈವಾರಾಧನೆಯ ಈ ಕಟ್ಟಳೆಯಲ್ಲಿ ಅಗತ್ಯವಾಗಿರುವುದು ಎಂಬ ನೆಲೆಯಲ್ಲಿ ಆ ವನಸಂಪತ್ತನ್ನು ಕಾಪಾಡುವಲ್ಲಿ ಆರಾಧನೆಯ ಮೂಲಕ ವ್ಯಕ್ತವಾಗುವ ಪರಿಸರ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಭಾವವನ್ನು ಗುರುತಿಸಬಹುದು.

ಬಬ್ಬರ್ಯ ಪಡವುದಪ್ಪೆನ ಪಾಡ್ದನ ಮುಂತಾದ ದೈವಗಳ ಪಾಡ್ದನಗಳಲ್ಲಿ ಕಂಡುಬರುವ ಮರ ಮುಹೂರ್ತಗಳ ಸಂದರ್ಭಗಳಲ್ಲಿ ಅಗತ್ಯವಾದ ಮರಗಳನ್ನು ಆರಿಸಿ ಸಂಬಂಧಪಟ್ಟವರ ಜೊತೆಗೂಡಿ ಮರದ ಬಳಿ ಕೈ ಮುಗಿದು ಮರವನ್ನುದ್ದೇಶಿಸಿ ಪ್ರಾರ್ಥನೆಯ ನುಡಿಯೊಂದಿಗೆ ಅನುಮತಿಯನ್ನು ಬೇಡುವ ಕ್ರಮವಿದೆ. ಇದನ್ನು ಅವಲೋಕಿಸಿದಾಗ ಇಲ್ಲಿ ಮನಬಂದಂತೆ ಪ್ರಕೃತಿ ಸಂಪತ್ತನ್ನು ಬಳಸದೆ ವಿಧಿವತ್ತಾಗಿ, ಪ್ರಜ್ಞಾಪೂರ್ವಕವಾಗಿ ಬಳಸಿಕೊಳ್ಳುವ ರೀತಿಯಲ್ಲಿ ಒಳಗೊಂಡ ಪ್ರಾಕೃತಿಕ ಕಾಳಜಿ, ಸಾಮಾಜಿಕ ಪ್ರಭಾವವನ್ನು ಗುರುತಿಸಬಹುದು. ಉದಾಹರಣೆಗೆ ಬಬ್ಬರ್ಯ ಪಾಡ್ದನದ ಸಾಲುಗಳು ಈ ಕೆಳಗಿನಂತಿವೆ.

**ಇನ್ನೂ ಹೀಗೇ ಕುಳಿತರೆ ಗೆಲವಿಲ್ಲ**
**ಅಂಗಡಿ ಇಕ್ಕಬೇಕು ವ್ಯಾಪಾರ ಮಾಡಬೇಕೆಂದ**
**ಕಡಲ ಬದಿಯಲ್ಲಿ ಮಡಲಿನ ಅಂಗಡಿ ಕಟ್ಟಿದ**
**ವ್ಯಾಪಾರ ಮಾಡಿದ**
**ಹಣ ಹೆಚ್ಚುತ್ತಾ ಬಂತು**
**ಆ ವೇಳೆಯಲ್ಲಿ ಹೇಳಿಕೊಂಡ ಬಬ್ಬರಿಯ ನನಗೆ ಪಡಾವಿನ ಕೆಲಸ ಹಿಡಿಯಬೇಕು**
**ಪಡಾವಿನ ವ್ಯಾಪಾರ ಮಾಡಬೇಕು**
**ಪಡಾವಿಗಾಗುವ ಮರ ನೋಡಬೇಕೆಂದ**
**ಕಟ್ಟೆ ಕಡಂಜಾರು ಕಾಡಿನಲ್ಲಿದೆ**
**ಬುಡ ಹೋಗಿ ಮುನ್ನೂರು ವರ್ಷ**
**ತುದಿ ಹೋಗಿ ಸಾವಿರ ವರ್ಷ**
**ಬಿಳಿ ತೇಕೋಟೆ ಮರ**
**ಅದೊಂದು ಮರವನ್ನು ಕಡಿಯಬೇಕಾಯಿತಲ್ಲ**
**ಮರವನ್ನು ಕಡಿಯಲು ಮಲೆನಾಡ ಅಚ್ಚವ**
**ತುಳುನಾಡ ಆಚಾರಿಗಳನ್ನು ಕರೆಸಿದರು**
**ಮರದಡೆಗೆ ಹೋಗಿ ನೋಡಿದರು ಆಚಾರಿ ಮಕ್ಕಳು**
**ನೆಲವನ್ನು ಸವರಿದರು ದೇವರಿಗೆ (ಕಾಣಿಕೆ) ಇಟ್ಟರು**
**ಆನೆಗಾತ್ರದ ಗಡಿ ಹಾಕಿದರು**

**ಆನೆಗಾತ್ರದ ಗಡಿ ಹಾಕುವಾಗ**
**ಪೈಯಷ್ಟೂ ಚಕ್ಕೆ ಏಳಲಿಲ್ಲ**
**ಇದೇನು ಸೋಜಿಗ ಕಷ್ಟ**
**ಮಾಯದ ಕಲಿಯುಗವೆಂದು ತಿಳಿಯುವುದಿಲ್ಲವೆಂದರು**
**ಪಂಚಾಂಗದ ಬಲ್ಯಾಯನನ್ನು ಕರೆದರು**
**ಸಾರಿಯ ಎಣಿಕೆಯಲ್ಲಿ ಓಲೆಯ ಓದಿಗೆಯಲ್ಲಿ ನೋಡಿದಾಗ**
**ಬುಡತುಂಡು ಕಾಲ್‌ಸೂರ ದೇವರಿಗೆ ಕೊಡಬೇಕು**
**ತುದಿತುಂಡು ತೆಗೆಯಬೇಕು**
**ಕೋಳ್ಯೂರ ದೇವರಿಗೆ ಕೊಡಬೇಕು**
**ಕುಜ್ಞಕ್ಕ ದೇವರ ದೇವಾಲಯ ಕಟ್ಟಿಸಬೇಕು**
**ಮಸೀದಿಯವರಿಗೆ ಮಸೀದಿ ಕಟ್ಟಿಸಬೇಕು**
**ಈಡುಕಾಣಿಕೆ ಇಟ್ಟರು ಪ್ರಾರ್ಥನೆ ಮಾಡಿದರು**
**ಆನೆ ಗಾತ್ರದ ಗಡಿಯಿಕ್ಕಿದರು**
**ಆಗಸದಲ್ಲಿ ಇದ್ದೊಂದು ಮರ**
**ಭೂಮಿಗೆರಗಿ ಬಂತು**
**ಮರ ಬೀಳುವ ಸದ್ದು ಎಲೆ ಬೀಳುವ ಬಿರುಸು**
**ಎಲ್ಲಿಗೆ ಕೇಳುತ್ತದೆಂದರೆ**
**ಬಡಗು ಬಾಕೂರು ತೆಂಕು ನೀಲೇಶ್ವರ**
**ಗೋವೆ ಕೊಚ್ಚಿಗೆ ಕೇಳುತ್ತದೆ**
**ಮರದ ಬುಡತುಂಡು ಕಾಲ್‌ಸೂರ ದೇವರಿಗೆ ಕೊಟ್ಟರು**
**ತುದಿತುಂಡು ಕೋಳ್ಯೂರ ದೇವರಿಗೆ ಕೊಟ್ಟರು**
**ಪಡಾವಿನ ಕೆಲಸ ತೊಡಗಿದರು**
**ಏಳು ವಿಂಗಡದ ಪಡಾವು ನಿರ್ಮಿಸಿದರು**
**ಕೆಲಸ ತೀರಿಸಿ ಪಡಾವನ್ನು ನೀರಿಗೆಳೆಯಬೇಕಾಯಿತು**
**ಮಂಗಳವಾರ ಸಿಂಹರಾಶಿಯಲ್ಲಿ ಪಡಾವಿಗೆ ಕಿತ್ತಿಪೂಜೆಯಾಯಿತು**

**(ಅಮೃತ ಸೋಮೇಶ್ವರ ತುಳು ಪಾಡ್ದನ ಸಂಪುಟ, ಪುಟ ಸಂಖ್ಯೆ 436–445)**

ಧಾರ್ಮಿಕ ಕ್ಷೇತ್ರಗಳಿಗೆ ಸಮೀಪವಿರುವ ಬಾವಿ, ಕೆರೆ, ತೊರೆಗಳ ಜಲಮೂಲಗಳನ್ನು ಮಾಲಿನ್ಯ ಮಾಡಿದರೆ ಕೇಡುಂಟಾಗುವುದು ಎಂಬ ನೆಲೆಯಲ್ಲಿ ಅವುಗಳನ್ನು ಪವಿತ್ರವಾಗಿ ನೋಡಿಕೊಳ್ಳಲಾಗುತ್ತದೆ. ನಾಗಾರಾಧನೆಯಲ್ಲಿ ನಾಗಬನಗಳು ಪ್ರಮುಖ ಪಾತ್ರವಹಿಸುತ್ತವೆ. ಆಧುನೀಕರಣದ ಭರದಲ್ಲಿ ನಾಗಾರಾಧನೆ ಸ್ಥಿತ್ಯಂತರಗೊಂಡರೂ ಜನಪದ ಆರಾಧನಾ ರಂಗಭೂಮಿಯ ಪೂರ್ವಪದ್ಧತಿಯ ಪ್ರಕಾರ ನಾಗಾರಾಧನೆ ಪ್ರಕೃತಿಯ ಹಚ್ಚಹಸಿರು ಬನಗಳ ಮಧ್ಯೆ ನಡೆಯುತ್ತಿತ್ತು. ನೈಸರ್ಗಿಕ ಕಲ್ಲಿನಲ್ಲಿ ನಾಗನನ್ನು ಕಲ್ಪಿಸಿ, ಆರಾಧಿಸಿಕೊಂಡು ಬರುವಲ್ಲಿ ನಾಗದೇವರ ನೆಲೆ ಎಂದು ನಂಬಲಾಗುವ 'ನಾಗಬನಗಳು' ಊರಿನ ಮಧ್ಯೆ ಉಂಟು ಮಾಡಿರುವ ಸಣ್ಣ ಕಾಡುಗಳು ಅಲ್ಲಿನ ಗಿಡಮರಗಳಿಂದಾಗಿ ತಂಪಾದ ವಾತಾವರಣ ಹಾಗೆಯೇ ನಾಗಬನದಲ್ಲಿ ದಟ್ಟವಾದ ಮರಗಳು ಮತ್ತು ಮಣ್ಣು ಇರುವುದರಿಂದ ಇವು ಮಳೆನೀರನ್ನು ಹಿಡಿದಿಟ್ಟುಕೊಂಡು ಆ ಪ್ರದೇಶವನ್ನು ತೇವವಾಗಿರುವಂತೆ ಮಾಡುತ್ತದೆ. ಆ ಪ್ರದೇಶದ ಬಾವಿ–ಕೆರೆಗಳಲ್ಲಿ ಅಂತರ್ಜಲ ಮಟ್ಟ ಸದಾ ಉತ್ತಮವಾಗಿರುತ್ತದೆ. ಇಲ್ಲಿ ಬೆಳೆಯುವ ಅಶ್ವತ್ಥ, ಆಲ, ಹಾಲವಾಣ... ಇತ್ಯಾದಿ ಮರಗಳು ಹಾಗೆಯೇ ಜನಪದೀಯ ಗಿಡಮೂಲಿಕೆಗಳು ನೈಸರ್ಗಿಕವಾಗಿ ರಕ್ಷಿಸಲ್ಪಡುತ್ತವೆ. ನಾಗಬನದೊಳಗೆ ಸ್ವೇಚ್ಛಾಚಾರದ ಪ್ರವೇಶವಿಲ್ಲ. ಹಾಗೆಯೇ ಬನದ ಗಿಡಮರಗಳನ್ನೂ ಕಡಿಯಬಾರದು, ಉಪಯೋಗಿಸಬಾರದೆನ್ನುವ ಕಟ್ಟುನಿಟ್ಟಿನ ಕ್ರಮ ಮತ್ತು ನಂಬಿಕೆಯ ಹಿಂದೆ ಸಾಮಾಜಿಕ ಕಾಳಜಿ ವ್ಯಕ್ತವಾಗುತ್ತದೆ.

ನ್ಯಾಯಾಂಗ ವ್ಯವಸ್ಥೆಯನ್ನು ಪರಿಚಯಿಸಲ್ಪಡದ ಕಾಲದಿಂದ ಪ್ರಸ್ತುತ ಕಾಲಘಟ್ಟದವರೆಗೆ ದೈವಾರಾಧನೆಯ ಕಟ್ಟುಕಟ್ಟಳೆಯಲ್ಲಿ, ದೈವದ ಕಲದಲ್ಲಿ, ನ್ಯಾಯ ತೀರ್ಮಾನ ನಡೆಯುತ್ತದೆ. ಜನರು ಜವಾಬ್ದಾರಿಯುತವಾಗಿ ವರ್ತಿಸಿ ದೈವನಿರ್ಣಯವನ್ನು ಪಾಲಿಸುವ ಮೂಲಕ ಶಾಂತಿ ಹಾಗೂ ಸಹಬಾಳ್ವೆಯಿಂದಿರುವರು. ಜನಪದರ ಆರಾಧನಾ ರಂಗಭೂಮಿ ಪರಂಪರಾಗತವಾಗಿ ನಡೆದು ಬರುತ್ತಿರುವ ಕಟ್ಟು-ಕಟ್ಟಳೆಯಾದಿಯಲ್ಲಿ ನಿರ್ದಿಷ್ಟ ಜವಾಬ್ದಾರಿಗಳನ್ನು, ನಿರ್ದಿಷ್ಟ ಸಮುದಾಯದವರು ನಿರ್ವಹಿಸಬೇಕೆನ್ನುವ ನಿಯಮವಿದೆ. ಎಲ್ಲಾ ಸಮುದಾಯಗಳ ಒಳಗೊಳ್ಳುವಿಕೆ ಹಾಗೂ ಸಹಬಾಳ್ವೆಯ ಮೂಲಕ ಜನಪದ ಆರಾಧನಾ ರಂಗಭೂಮಿ ಬೀರುವ ಸಾಮಾಜಿಕ ಪ್ರಭಾವವನ್ನು ತಿಳಿದುಕೊಳ್ಳಬಹುದು.

ಜನಪದವು ಒಂದು ಸಮಾಜದ ಬದುಕಿನ ಅನುಭವ, ನಂಬಿಕೆ, ಆಚರಣೆ, ಸಂಪ್ರದಾಯ, ಕಲೆ, ಸಾಹಿತ್ಯ ಮತ್ತು ಜೀವನಮೌಲ್ಯಗಳ ಸಮಗ್ರ ಅಭಿವ್ಯಕ್ತಿಯಾಗಿದೆ. ಜನಸಾಮಾನ್ಯರ ಜೀವನದೊಂದಿಗೆ ನೇರವಾಗಿ ಬೆಸೆದುಕೊಂಡಿರುವ ಜನಪದ ಕಲೆಗಳಲ್ಲಿ ಜನಪದ ರಂಗಭೂಮಿ ಪ್ರಮುಖವಾದುದು. ಅಕ್ಷರಜ್ಞಾನ ಕಡಿಮೆ ಇದ್ದ ಕಾಲದಲ್ಲಿಯೂ ಜನರಿಗೆ ಮನರಂಜನೆಯ ಜೊತೆಗೆ ಜ್ಞಾನ, ನೀತಿ, ಧಾರ್ಮಿಕ ನಂಬಿಕೆ ಮತ್ತು ಸಾಮಾಜಿಕ ಸಂದೇಶಗಳನ್ನು ತಲುಪಿಸುವ ಪರಿಣಾಮಕಾರಿ ಮಾಧ್ಯಮವಾಗಿ ಜನಪದ ರಂಗಭೂಮಿ ಕಾರ್ಯನಿರ್ವಹಿಸಿದೆ. ಜನಪದ ರಂಗಭೂಮಿ ಕೇವಲ ಮನೋರಂಜನೆಯ ಕಲೆಯಲ್ಲ. ಅದು ಒಂದು ಸಮುದಾಯದ ಸಾಮಾಜಿಕ ಸ್ಮೃತಿ. ಸಾಂಸ್ಕೃತಿಕ ಪರಂಪರೆ ಮತ್ತು ಸಾಮೂಹಿಕ ಚಿಂತನೆಯ ಪ್ರತಿಬಿಂಬವಾಗಿದೆ.

ನೈತಿಕ ಮೌಲ್ಯಗಳ ಪ್ರಸಾರ, ಸತ್ಯ, ಧರ್ಮ, ನ್ಯಾಯ, ಪ್ರಾಮಾಣಿಕತೆ, ತ್ಯಾಗ, ಸಹಾನುಭೂತಿ, ಪರೋಪಕಾರ ಮುಂತಾದ ಮೌಲ್ಯಗಳನ್ನು ಪ್ರದರ್ಶನಕಲೆ ಕಥೆಗಳ ಮೂಲಕ ಜನರಿಗೆ ತಿಳಿಸುತ್ತದೆ. ಒಳ್ಳೆಯದಕ್ಕೆ ಅಂತಿಮವಾಗಿ ಜಯ ದೊರೆಯುತ್ತದೆ ಎಂಬ ನೈತಿಕ ಸಂದೇಶ ಅನೇಕ ಜನಪದ ಕಥಾನಕಗಳ ಮುಖ್ಯ ಆಶಯವಾಗಿದೆ. ಜಾಗತೀಕರಣದ ಈ ಯುಗದಲ್ಲಿ ಜನಪದ ಆರಾಧನ ರಂಗಭೂಮಿಯ ತತ್ವ ಹಾಗೂ ನೈಸರ್ಗಿಕ ರೂಪವನ್ನು ಉಳಿಸಿಕೊಂಡು ಅದನ್ನು ಸಂರಕ್ಷಿಸುವುದು ಮತ್ತು ಗೌರವಿಸುವುದು ಇಂದಿನ ಸಮಾಜದ ಅತ್ಯಗತ್ಯ ಕರ್ತವ್ಯವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಮಲ್ಲೇಪುರಂ ಜಿ. ವೆಂಕಟೇಶ, (2007), ತುಳು ಸಾಹಿತ್ಯ ಚರಿತ್ರೆ, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.
2. ಅಮೃತ ಸೋಮೇಶ್ವರ, (1997), ತುಳು ಪಾಡ್ದನ ಸಂಪುಟ, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.
3. ರಾಘವ ನಂಬಿಯಾರ್ ಕೆ. ಎಂ., (2018), ಪಡವುದಪ್ಪೆನ ಪಾರ್ದನ, ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ.

**ಮಾಹಿತಿದಾರರು:**

1. ಚಿನ್ನಪ್ಪ ಗೌಡ, ವಿಶ್ರಾಂತ ಕುಲಪತಿಗಳು, ಜಾನಪದ ವಿಶ್ವವಿದ್ಯಾನಿಲಯ, ಹಾವೇರಿ
2. ಅರ್ಪಿತಾ ಶೆಟ್ಟಿ, ಉಪನ್ಯಾಸಕಿ, ಮಣಿಪಾಲ ಸಮೂಹ ಸಂಸ್ಥೆಗಳ
3. ಸಾಯಿಗೀತಾ ಹೆಗ್ಡೆ, ಮುಖ್ಯಸ್ಥರು, ಡಾ. ಕೆ.ಆರ್. ಶೆಟ್ಟಿ ತುಳು ಅಧ್ಯಯನ ಕೇಂದ್ರ, ನಿಟ್ಟೆ ವಿಶ್ವವಿದ್ಯಾನಿಲಯ.